ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1857
ಸದಸ್ಯರ ಹೆಸರು	ಡಾ॥ ಜೈಮಾಲ ರಾಮಚಂದ್ರ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	24.03.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಗಣಿಗಾರಿಕೆ ಪರವಾನಿಗೆ ಪಡೆಯಲು ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಎಷ್ಟು ಅರ್ಜಿಗಳು ವಿಲೇವಾರಿಯಾಗಿದೆ; ಎಷ್ಟು ಅರ್ಜಿಗಳನ್ನು ಇನ್ನೂ ಬಾಕಿ ಇಡಲಾಗಿದೆ; ಇದಕ್ಕೆ ಕಾರಣವೇನು; (ಸಂಪೂರ್ಣ ವಿವರ ನೀಡುವುದು)	ಎಲ್ಲಾ ಮುಖ್ಯ ಖನಿಜಗಳಿಗೆ ಅನ್ವಯಿಸಿ ಕೇಂದ್ರ ಸರ್ಕಾರವು ಎಂ.ಎಂ.(ಡಿ&ಆರ್) ಕಾಯ್ದೆ, 1957ಕ್ಕೆ ದಿನಾಂಕ 12.01.2015 ರಿಂದ ಜಾರಿಗೆ ಬರುವಂತೆ ಅಮೂಲಾಗ್ರ ಬದಲಾವಣೆಯಿರುವ ತಿದ್ದುಪಡಿ ಮಾಡಿದೆ. ತಿದ್ದುಪಡಿ ಕಾಯ್ದೆಯನ್ವಯ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡುವ ಪದ್ಧತಿಗೆ ತಿಲಾಂಜಲಿ ನೀಡಿ, ನೈಸರ್ಗಿಕ ಸಂಪನ್ಮೂಲಗಳನ್ನು ಪಾರದರ್ಶಕವಾಗಿ ಇ-ಹರಾಜು ಮೂಲಕ ವಿಲೇ/ಮಂಜೂರು ಮಾಡುವ ಪದ್ಧತಿಯನ್ನು ಜಾರಿಗೆ ತಂದಿದೆ. ಆದುದರಿಂದ, ಗಣಿಗುತ್ತಿಗೆ ಮಂಜೂರಾತಿಗೆ ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ. ಅಂಚೆ ಮೂಲಕ ಸ್ವೀಕೃತಗೊಂಡ ಅರ್ಜಿಗಳನ್ನು ಹಿಂದಿರುಗಿಸಲಾಗುತ್ತಿದೆ. ರಾಜ್ಯ ಸರ್ಕಾರವು ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಗಳಂತೆ ಸರ್ಕಾರಿ ಜಮೀನುಗಳಲ್ಲಿ ಉಪಖನಿಜ ಗಣಿಗುತ್ತಿಗೆಗಳನ್ನು ಹರಾಜು ಮೂಲಕ ಮಂಜೂರು ಮಾಡಬೇಕಾಗಿರುತ್ತದೆ. ಪಟ್ಟಾ ಜಮೀನುಗಳಲ್ಲಿ ಲಭ್ಯವಿರುವ ಖನಿಜವನ್ನು ತೆಗೆಯಲು ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನಾ ಆದೇಶ, ಪರಿಸರ ಅನುಮತಿ ಪತ್ರಗಳನ್ನು ಪಡೆದು ಕಲ್ಲುಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ. ಪಟ್ಟಾ ಜಮೀನುಗಳಲ್ಲಿ ಉಪಖನಿಜ ಗಣಿಗಾರಿಕೆಗೆ ಗಣಿ ಗುತ್ತಿಗೆ ಕೋರಿ ಕಳೆದ 03 ವರ್ಷಗಳಲ್ಲಿ ಸಲ್ಲಿಸಿರುವ ಅರ್ಜಿಗಳ ಮಾಹಿತಿ ಕೆಳಕಂಡಂತಿದೆ:

ನಿರ್ಧಿಷ್ಟ ಉಪಖನಿಜ (ಗ್ರಾನೈಟ್)			ನಿರ್ಧಿಷ್ಟವಲ್ಲದ ಉಪಖನಿಜ (ಕಟ್ಟಡ ಕಲ್ಲು, ಮರಳು, ಮುರ್ರಂ, ಇತ್ಯಾದಿ)		
ಸ್ವೀಕೃತವಾದ ಒಟ್ಟು ಅರ್ಜಿಗಳ ಸಂಖ್ಯೆ	ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಿದ ಅರ್ಜಿಗಳ ಸಂಖ್ಯೆ	ಬಾಕಿ ಇರುವ ಒಟ್ಟು ಅರ್ಜಿಗಳ ಸಂಖ್ಯೆ	ಸ್ವೀಕೃತವಾದ ಒಟ್ಟು ಅರ್ಜಿಗಳ ಸಂಖ್ಯೆ	ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಿದ ಅರ್ಜಿಗಳ ಸಂಖ್ಯೆ	ಬಾಕಿ ಇರುವ ಅರ್ಜಿಗಳ ಸಂಖ್ಯೆ
306	88	218	1108	442	666

--2

		ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 32ರಂತೆ ಪಟ್ಟಾ ಜಮೀನುಗಳಲ್ಲಿ ಕಲ್ಲುಗಣಿಗಾರಿಕೆ ಮಂಜೂರಾತಿಗೆ ಪೂರ್ವದಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನಾ ಆದೇಶ, ಪರಿಸರ ಅನುಮತಿ ಪತ್ರ ಅವಶ್ಯವಿರುತ್ತವೆ. ಸದರಿ ಶಾಸನಬದ್ಧ ದಾಖಲಾತಿಗಳು ಸಲ್ಲಿಕೆಯಾಗದ ಕಾರಣ ಕಲ್ಲುಗಣಿ ಗುತ್ತಿಗೆ ಕೋರಿರುವ ಅರ್ಜಿಗಳು ಬಾಕಿ ಇರುತ್ತವೆ.
ಆ)	ಹೊಸದಾಗಿ ಗಣಿಗಾರಿಕೆ ಮಾಡಲು ಇರುವ ಮಾನದಂಡಗಳೇನು; ಗಣಿಗಾರಿಕೆ ನಡೆಸಲು ಪರವಾನಿಗಿದಾರರು ಹೊಂದಬೇಕಾದ ಅರ್ಹತೆಗಳೇನು:	ಹೊಸದಾಗಿ ಗಣಿಗಾರಿಕೆಗಾಗಿ ಗಣಿ ಗುತ್ತಿಗೆಗಳನ್ನು ಹರಾಜಿನಲ್ಲಿ ಭಾಗವಹಿಸಿ ಬಿಡ್ಡು ಮಾಡುವ ಮೂಲಕ ಪಡೆಯಬಹುದಾಗಿದೆ. ಹರಾಜಿನಲ್ಲಿ ಭಾಗವಹಿಸುವ 1) ವ್ಯಕ್ತಿ/ಪಾಲುದಾರಿಕೆ ಸಂಸ್ಥೆಯಲ್ಲಿನ ಪಾಲುದಾರರು ಅಥವಾ ಕಂಪನಿಯಾಗಿದ್ದಲ್ಲಿ ಆ ಕಂಪನಿಯು The Companies Act, 2013ರ ಕಲಂ(2) ರಡಿ ನೊಂದಣಿಯಾಗಿರಬೇಕು. 2)ಹರಾಜಿಗಿರುವ ಗಣಿಗುತ್ತಿಗೆ ಬ್ಲಾಕಿನ ನಿರ್ಧಾರಿತ ಮೌಲ್ಯವು ಸಾವಿರ ಕೋಟಿಗಿಂತ ಹೆಚ್ಚಿದ್ದಲ್ಲಿ ಶೇಕಡಾ 2ರಷ್ಟು ನೂರರಿಂದ ಸಾವಿರಕೋಟಿವರೆಗೆ ಇದ್ದಲ್ಲಿ ಶೇಕಡಾ 1ರಷ್ಟು ಮತ್ತು ನೂರು ಕೋಟಿಗಿಂತ ಕಡಿಮೆ ಇದ್ದಲ್ಲಿ ಶೇಕಡಾ 0.5ರಷ್ಟರ Net worth ನ್ನು ಹರಾಜಿನಲ್ಲಿ ಭಾಗವಹಿಸುವ ವ್ಯಕ್ತಿ/ಪಾಲುದಾರಿಕೆ ಸಂಸ್ಥೆ/ಕಂಪನಿಯು ಹೊಂದಿರಬೇಕು. 3) ಹರಾಜಿಗಿಟ್ಟ ಗಣಿ ಗುತ್ತಿಗೆ ಬ್ಲಾಕನ್ನು ಸ್ವಂತ ಬಳಕೆಗೆ ಎಂದು ನಿರ್ಧಿಷ್ಟಪಡಿಸಿದ್ದಲ್ಲಿ ಅಂತಹ ಬ್ಲಾಕ್‌ನ ಬಿಡ್‌ನಲ್ಲಿ ಭಾಗವಹಿಸಲು End-use (ಖನಿಜಾಧಾರಿತ ಕಾರ್ಖಾನೆಯನ್ನು) Plant ಹೊಂದಿರಬೇಕು. ರಾಜ್ಯ ಸರ್ಕಾರವು ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಗಳಂತೆ ಸರ್ಕಾರಿ ಜಮೀನುಗಳಲ್ಲಿ ಉಪಖನಿಜ ಗಣಿಗುತ್ತಿಗೆಗಳನ್ನು ಹರಾಜು ಮೂಲಕ ಮಂಜೂರು ಮಾಡಬೇಕಾಗಿರುತ್ತದೆ ಕಲ್ಲುಗಣಿ ಗುತ್ತಿಗೆ ಕೋರುವ ಅರ್ಜಿದಾರರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ನಿಗಧಿಪಡಿಸುವ ವಾರ್ಷಿಕ ವಹಿವಾಟು, (Turnover) ನಿವ್ವಳ ವಾರ್ಷಿಕ ಆದಾಯ (Net worth) ಹಾಗೂ ಇತರೆ ತಾಂತ್ರಿಕ ಅರ್ಹತೆಗಳನ್ನು ಹೊಂದಿರಬೇಕಾಗಿರುತ್ತದೆ
ಇ)	ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದಕ್ಕೆ ಸಂಬಂಧಿಸಿದಂತೆ ದಾಖಲಾದ ದೂರುಗಳೆಷ್ಟು; ಇದರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಎಂ.ಎಂ.(ಡಿ& ಆರ್) 1957ರ ಕಾಯ್ದೆ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಮೊಕದ್ದಮೆಗಳನ್ನು ದಾಖಲಿಸಲು ಕ್ರಮ ಜರುಗಿಸಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಕಲ್ಲು ಮತ್ತು ಮರಳು ಗಣಿಗಾರಿಕೆ ಸಂಬಂಧ ಕೈಗೊಂಡ ಕ್ರಮದ ವಿವರ ಕೆಳಕಂಡಂತಿದೆ:

–3

ಮುಖ್ಯ ಖನಿಜ ಗಣಿಗಾರಿಕೆ :–

ಕ್ರ. ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ (ರೂ.ಲಕ್ಷಗಳಲ್ಲಿ)
1.	2017–18	01	–	0.5
2.	2018–19	05	–	2.0
3.	2019–20	02	–	–

ಕಲ್ಲು ಗಣಿಗಾರಿಕೆ :–

ಕ್ರ. ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ (ರೂ.ಲಕ್ಷಗಳಲ್ಲಿ)
1.	2017–18	404	114	613.25
2.	2018–19	413	108	1213.37
3.	2019–20	266	117	908.70
ಒಟ್ಟು		1083	339	2735.32

ಮರಳು ಗಣಿಗಾರಿಕೆ:–

ಕ್ರ. ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ (ರೂ.ಲಕ್ಷಗಳಲ್ಲಿ)
1.	2017–18	4007	2692	2073.36
2.	2018–19	3869	2893	910.38
3.	2019–20	1590	938	296.08
ಒಟ್ಟು		9466	6523	3279.82

ಸಂಖ್ಯೆ: ಸಿಐ 195 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು